*ಸಮತೆಯೆಡೆಗೆ ನಮ್ಮ ನಡಿಗೆ*

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

**'ನಮ್ಮ ಬದುಕು ನಮ್ಮ ಹಕ್ಕು, ಹೆಣ್ಣು ಮಗಳು ಜಗದ ಬೆಳಕು'**

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 8, 9 ಮಾರ್ಚ್ 2018, ಶಿವಮೊಗ್ಗ**

ವಿಚಾರ ಸಂಕಿರಣ, ಹಕ್ಕೊತ್ತಾಯ ಜಾಥಾ

ಹಾಗೂ ಬೃಹತ್ ಸಾರ್ವಜನಿಕ ಸಮಾವೇಶ

**ಸಹೃದಯರೇ,**

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇಟ್ಟು ಕೆಲಸ ಮಾಡುತ್ತಿರುವ ಮಹಿಳಾ ಹಾಗೂ ಸಮಾನ ಮನಸ್ಕ ಸಂಘಟನೆಗಳು ಒಗ್ಗೂಡಿ 2012ರಲ್ಲಿ ಹುಟ್ಟುಹಾಕಿದ **"ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ"**ವು ಹಿಂಸೆ, ತಾರತಮ್ಯ ಮುಕ್ತ ಆರೋಗ್ಯಕರ ಸಮಸಮಾಜವನ್ನು ಕಟ್ಟುವ ಆಶಯವನ್ನು ಹೊಂದಿದೆ. ಅನಾದಿ ಕಾಲದಿಂದಲೂ ನಡೆಯುತ್ತಲೇ ಬಂದಿರುವ ಮಹಿಳೆಯರ ಮೇಲಿನ ಹಿಂಸೆ, ಅನ್ಯಾಯ, ಅಸಮಾನತೆಗಳಿಗೆ ಯಾವ ಗಡಿ, ದೇಶ, ಜಾತಿ, ಧರ್ಮ, ಸಂಸ್ಕೃತಿಗಳೂ ಹೊರತಲ್ಲ. ಅವು ಪ್ರಾಚೀನ ಯುಗವೋ, ಡಿಜಿಟಲ್ ಯುಗವೋ ಎಂಬ ಬೇಧವೂ ಇಲ್ಲದ ಸಾರ್ವಕಾಲಿಕ ಕಹಿ ವಾಸ್ತವವಾಗಿವೆ. ಹಾಗೆಯೇ ಪ್ರತಿಯೊಂದು ಕಾಲಘಟ್ಟದಲ್ಲೂ ಹಿಂಸೆ, ಅನ್ಯಾಯ ಮತ್ತು ಅಸಮಾನತೆಗಳ ವಿರುದ್ಧ ಆತ್ಮವಿಶ್ವಾಸದಿಂದ ಪ್ರತಿರೋಧ ಒಡ್ಡುತ್ತಲೇ ಬಂದಿರುವ ಮಹಿಳೆಯರ ಬದುಕು ಮತ್ತು ಹೋರಾಟ ನಮ್ಮ ಚೈತನ್ಯವಾಗಬೇಕಿದೆ. ಹಾಗಾಗಿ ಒಕ್ಕೂಟವು ಕಳೆದ ನಾಲ್ಕು ವರುಷಗಳಿಂದ ಸಾವಿರಾರು ಮಹಿಳೆಯರನ್ನು ಸಂಘಟಿಸಿ, ಮಾರ್ಚ್ 8ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು **ಮಹಿಳಾ ಚೈತನ್ಯದ ದಿನ**ವಾಗಿ ರಾಜ್ಯಮಟ್ಟದಲ್ಲಿ ಆಚರಿಸುತ್ತಾ ಬಂದಿದೆ. ಮಂಗಳೂರಿನಲ್ಲಿ 2013ರಲ್ಲಿ, ಮೈಸೂರಿನಲ್ಲಿ 2014ರಲ್ಲಿ, ಬೆಂಗಳೂರಿನಲ್ಲಿ 2015ರಲ್ಲಿ, ವಿಜಯಪುರದಲ್ಲಿ 2016ರಲ್ಲಿ ಹಾಗೂ ಕೊಪ್ಪಳದಲ್ಲಿ 2017ರಲ್ಲಿ ಯಶಸ್ವಿಯಾಗಿ ಆಚರಿಸಿದ ಮಹಿಳಾ ದಿನಾಚರಣೆಗಳು ರಾಜ್ಯದ ಮಹಿಳಾ ಚಳವಳಿಯ ಮೈಲಿಗಲ್ಲಾಗಿವೆ.

ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಮಲೆನಾಡ ಮಡಿಲ ಶಿವಮೊಗ್ಗ ಜಿಲ್ಲೆಯು ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭುವಿನ ಹಾಗೂ ವಿಶ್ವಮಾನವತೆಯನ್ನು ಸಾರಿದ ರಾಷ್ಟ್ರಕವಿ ಕುವೆಂಪುರವರ ತವರೂರು. ಸಾಹಿತ್ಯ, ಕಲೆ, ಸಂಸ್ಕೃತಿಗೆ ಹೆಸರಾಗಿರುವಂತೆ ದುಡಿಯುವ ವರ್ಗದವರ ಹೋರಾಟಗಳಿಗೆ, ಬಂಡಾಯಕ್ಕೆ ಇಂಬಾದ ನೆಲವೂ ಹೌದು. ಕರ್ನಾಟಕ ದಲಿತ ಚಳುವಳಿ, ರೈತ ಚಳುವಳಿ, ಸಮಾಜವಾದಿ ಚಳುವಳಿ, ಬಂಡಾಯ ಸಾಹಿತ್ಯ ಚಳುವಳಿ, ಪರಿಸರ ಚಳುವಳಿಗಳಿಗೆ ಆರಂಭ ನೀಡಿದ ನೆಲ ಇದಾಗಿದೆ. ಇಂತಹ ಕಲೆ–ಸಾಹಿತ್ಯ–ಸಂಸ್ಕೃತಿ–ಹೋರಾಟಗಳ ತುಂಗೆ ಭದ್ರೆಯರ ಈ ನೆಲದಲ್ಲಿ ಈ ಬಾರಿಯ ಮಹಿಳಾ ದಿನಾಚರಣೆ ನಡೆಯಲಿದೆ. ಶಿವಮೊಗ್ಗದ ಪ್ರಗತಿಪರ, ಜನಪರ ಸಂಘಟನೆಗಳೆಲ್ಲವೂ ಸಮಾವೇಶವನ್ನು ಯಶಸ್ವಿಗೊಳಿಸಲು ಕೈ ಜೋಡಿಸಿವೆ. ಪ್ರತಿ ಸಾರಿಯಂತೆ ಈ ಸಲವೂ ವಿಚಾರ ಸಂಕಿರಣ, ಹಕ್ಕೊತ್ತಾಯ ಜಾಥಾ ಹಾಗೂ ಸಾರ್ವಜನಿಕ ಸಭೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಕಲ್ಯಾಣರಾಜ್ಯದ ಕಲ್ಪನೆಯನ್ನು ಕೈ ಬಿಟ್ಟು ಕಾರ್ಪೋರೇಟ್ ರಾಜ್ಯ ಸ್ಥಾಪನೆಗೆ ಅನುವು ಮಾಡಿಕೊಟ್ಟಿರುವ ಲಾಭಕೋರ ಮಾರುಕಟ್ಟೆ ಆರ್ಥಿಕತೆಯು ಹಲವು ಬಿಕ್ಕಟ್ಟುಗಳನ್ನು ತಂದೊಡ್ಡಿರುವ ಸಂಕಷ್ಟದ ಕಾಲವಿದು. ಪೌರಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಗಾರ್ಮೆಂಟ್ಸ್ ಕಾರ್ಮಿಕರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಕೃಷಿ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದಲ್ಲಿ ದುಡಿಯುವವರ ಸಂಖ್ಯೆ ಶೇ. 92.3ರಷ್ಟಿದೆ. ದೇಶದ ಆಂತರಿಕ ಉತ್ಪನ್ನಕ್ಕೆ ಅವರು ನೀಡುತ್ತಿರುವ ಕೊಡುಗೆ ಶೇ. 60ರಷ್ಟು. ಮೂಲಸೌಕರ್ಯಗಳು, ಸೌಲಭ್ಯಗಳು, ಆಯಾ ಕಾಲದ ಅಗತ್ಯಕ್ಕೆ ತಕ್ಕಂತೆ ಬದುಕುವ ವೇತನವೂ ಇಲ್ಲದೆ ಅತಿಯಾದ ದುಡಿತಕ್ಕೆ ಒಳಗಾಗಿರುವ ಇವರು, ಉದ್ಯೋಗ ಭದ್ರತೆಯೂ ಇಲ್ಲದೆ ಸದಾ ಆತಂಕದಲ್ಲೇ ಬದುಕುತ್ತಾರೆ. ಮಹಿಳೆಯರು, ದಲಿತರು ಮತ್ತು ಆದಿವಾಸಿಗಳ ಕಲ್ಯಾಣಕ್ಕೆಂದು ಮೀಸಲಿಡುವ ಸಹಾಯಧನವನ್ನು ಸೂಕ್ತವಾಗಿ ಬಳಸದೆ ಹಿಂತಿರುಗಿಸಲಾಗುತ್ತಿದೆ. ಆರೋಗ್ಯ, ಉದ್ಯೋಗ ಮತ್ತು ಶಿಕ್ಷಣಕ್ಕೆ ಬಜೆಟ್‌ನಲ್ಲಿ ಮೀಸಲಿಡುವ ಹಣ ಕಡಿತಗೊಳ್ಳುತ್ತಿದೆ. ದುಡಿಯುವ ಜನರಿಗೆ ಸ್ವಲ್ಪವಾದರೂ ಸಹಾಯಕವಾಗಿದ್ದ ಉದ್ಯೋಗ ಖಾತ್ರಿ ಯೋಜನೆಗಳನ್ನು

ನಿಲ್ಲಿಸಲಾಗುತ್ತಿದೆ. ಹೈಟೆಕ್ ಯುಗದಲ್ಲಿಯೂ ಜಾತಿ ದೌರ್ಜನ್ಯಗಳು ಮುಂದುವರೆದಿದೆಯಲ್ಲದೇ ಪೌರಕಾರ್ಮಿಕರು ಬರಿಗೈಲಿ ಕಸ-ಮಲ ಬಾಚುತ್ತ ಅಮಾನವೀಯ ಅಸ್ಪೃಶ್ಯತೆಯಲ್ಲಿ ಬದುಕುತ್ತಿದ್ದಾರೆ. ನೇಕಾರರು-ಕೃಷಿ ಕೂಲಿ ಕಾರ್ಮಿಕರು ಹತಾಶ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಅಭಿವೃದ್ಧಿಯ, ಯೋಜನೆಗಳ ನೆಪದಲ್ಲಿ ಆದಿವಾಸಿಗಳನ್ನು, ರೈತರನ್ನು, ವಂಚಿತ ಸಮುದಾಯಗಳನ್ನು ಎತ್ತಂಗಡಿ ಮಾಡಲಾಗುತ್ತಿದೆ. ಕೋಟ್ಯಾಧೀಶರ ಕಾರ್ಪೋರೇಟ್, ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚೆಚ್ಚು ರಿಯಾಯ್ತಿ, ಸಬ್ಸಿಡಿ ಪಡೆದುಕೊಂಡು ಜಗತ್ತಿನ ಅತ್ಯಂತ ಶ್ರೀಮಂತರ ಪಟ್ಟಿಗೆ ಸೇರ್ಪಡೆಯಾಗುತ್ತಿವೆ.

ಮಹಿಳೆಯರನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ಕಾಣುವ ಪಿತೃಸಂಸ್ಕೃತಿ ಮತ್ತು ಲಾಭಕೋರ ಮಾರುಕಟ್ಟೆ ಆರ್ಥಿಕತೆಯು ಮತಾಂಧತೆಯೊಂದಿಗೆ ಕೈಜೋಡಿಸಿರುವುದರಿಂದ ಮಹಿಳೆಯ ಮೇಲಿನ ಹಿಂಸೆಯ ಸ್ವರೂಪಗಳು ಸಂಕೀರ್ಣಗೊಂಡಿವೆ, ಇತ್ತೀಚೆಗೆ ಪ್ರಜಾಸತ್ತಾತ್ಮಕ ಧರ್ಮನಿರಪೇಕ್ಷ ಮೌಲ್ಯಗಳನ್ನು ದಿಟ್ಟತೆಯಿಂದ ಪ್ರತಿಪಾದಿಸುತ್ತಿದ್ದ ಪತ್ರಕರ್ತೆ ಗೌರಿ ಲಂಕೇಶರ ಬರ್ಬರ ಹತ್ಯೆ, ವಿಜಯಪುರದ ಅಪ್ರಾಪ್ತ ಬಾಲಕಿಯ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಮತ್ತು ಹತ್ಯೆ, ಮೂಡಿಗೆರೆ-ಕೆ ಆರ್ ಪೇಟೆಯ ಅಮಾಯಕ ಯುವತಿಯರು ಅನ್ಯ ಧರ್ಮೀಯರೊಡನೆ ಸ್ನೇಹ ಬೆಳೆಸಿದ ಕಾರಣಕ್ಕೆ ಸಾಮಾಜಿಕ ಜಾಲತಾಣದಲ್ಲಿ ನಿಂದನೆಗೊಳಗಾಗಿ ಜೀವತೆತ್ತದ್ದು, ಮುಂಡರಗಿಯ ದೇವದಾಸಿ ಮಹಿಳೆಯೊಬ್ಬರು ಅನುಮಾನಾಸ್ಪದವಾಗಿ ಸುಟ್ಟುಕೊಂಡು ಸತ್ತುಹೋದಂತಹ ಪ್ರಕರಣಗಳನ್ನೇ ಗಮನಿಸಬಹುದು. ದೇವದಾಸಿ ಪದ್ಧತಿ ಮತ್ತು ಮಾನವ ಸಾಗಣೆ, ಉದ್ಯೋಗ ಸ್ಥಳದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗೆ, ಅತ್ಯಾಚಾರ ತಡೆಗೆ ಅತಿ ಕಠಿಣ ಕಾನೂನುಗಳನ್ನು ತಂದರೂ ಮಹಿಳೆಯರ ಹಾಗೂ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಿದೆ. 40% ಅತ್ಯಾಚಾರಗಳು ಶೌಚಕ್ಕೆಂದು ಮನೆಯಿಂದ ಹೊರಹೋದಾಗಲೇ ಸಂಭವಿಸುತ್ತಿವೆ. ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆ ಧರ್ಮ/ಕೋಮು/ಜಾತಿ ವೈಷಮ್ಯದ ದಾಳವಾಗಿ ಬಳಕೆಯಾಗುತ್ತಿದ್ದಾಳೆ. ಹಿಂಸೆ, ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾಳೆ.

ಕೃಷಿ ಬಿಕ್ಕಟ್ಟು, ಅಸಮಾನ ಕೂಲಿ, ಜಾತಿದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ಉದ್ಯೋಗ ಭದ್ರತೆಯಿಲ್ಲದ, ಅಸುರಕ್ಷಿತ ಕೆಲಸದ ವಾತಾವರಣವಿರುವ ಗಾರ್ಮೆಂಟ್ಸ್‌ನಂತಹ ಅಸಂಘಟಿತ ವಲಯದಲ್ಲಿ ದುಡಿಮೆ, ಹೆಣ್ಣಿಗೆ ಆಯ್ಕೆ ಅವಕಾಶ ಹಾಗೂ ಸಬಲೀಕರಣವನ್ನು ನಿರಾಕರಿಸುವ ಬಾಲ್ಯವಿವಾಹ; ಹೆಣ್ಣು ಭೂಮಿಗೆ ಬರುವುದನ್ನೇ ತಡೆಗಟ್ಟುವ ಸ್ತ್ರೀ ಭ್ರೂಣ ಹತ್ಯೆ; ಲೈಂಗಿಕ ದೌರ್ಜನ್ಯ, ತಾಯಿ ಮರಣ, ಶಿಶು ಮರಣ, ವರದಕ್ಷಿಣೆ, ಮುಟ್ಟಿನ ಮೌಢ್ಯ, ಮದ್ಯಪಾನ, ಇವೆಲ್ಲವೂ ಶಿವಮೊಗ್ಗ ಜಿಲ್ಲೆಯ ಮಹಿಳೆಯರನ್ನು ಬಾಧಿಸುತ್ತಿರುವ ಜ್ವಲಂತ ಸಮಸ್ಯೆಗಳಾಗಿವೆ. ಈ ವಿಷಯಗಳ ಕುರಿತು ಯುವ ಜನಾಂಗ ಮತ್ತು ದಲಿತ ದಮನಿತರೊಂದಿಗೆ ಸಂವಾದಿಸುವ ಆಶಯದೊಂದಿಗೆ 'ಮುಟ್ಟು ಮುಟ್ಟೆಂದೇಕೆ?' ಜಾಗೃತಿ ಅಭಿಯಾನ, ಪ್ರೌಢಶಾಲೆ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ 'ಅರಿವಿನ ಪಯಣ' ಅಭಿಯಾನ ಮತ್ತು ಸಾವಿತ್ರಿ ಬಾಯಿ ಫುಲೆ ನೆನಪಿನ 'ಅರಿವಿನ ಅವ್ವನ ದೊಂದಿಯ ಹಿಡಿದು' ಎಂಬ ಅಭಿಯಾನಗಳನ್ನು ಒಕ್ಕೂಟವು ಆಯೋಜಿಸಿ ನಡೆಸಿಕೊಂಡು ಬರುತ್ತಿದೆ. ಅಭಿಯಾನಗಳ ಭಾಗವಾಗಿ ಕಿರುಪುಸ್ತಿಕೆ, ಕಿರು ನಾಟಕ, ಹಾಡುಗಳ ಮೂಲಕ ಶಿವಮೊಗ್ಗೆಯ ಸಾವಿರಾರು ಶಾಲಾಕಾಲೇಜು ವಿದ್ಯಾರ್ಥಿಗಳನ್ನು ಮತ್ತು ಅಲ್ಲಿಯ ಹಳ್ಳಿಯ ಕೇರಿಗಳು ಮತ್ತು ನಗರದ ಸ್ಲಂಗಳಲ್ಲಿ ವಾಸಿಸುವ ದಲಿತ ದಮನಿತರನ್ನು ತಲುಪುವ ಪ್ರಯತ್ನವನ್ನು ಒಕ್ಕೂಟವು ಮಾಡಿದೆ.

ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಸಕಲರ ಏಳಿಗೆಗೂ ಕಾನೂನುಬದ್ಧ ಅವಕಾಶ ನೀಡುವ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯನ್ನು ಸಾರುವ ಸಂವಿಧಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಅಂತಹ ಕೆಲಸ ಸಾಧ್ಯವಾಗುವುದು ಅನ್ಯಾಯ, ಅಸಮಾನತೆಯನ್ನು ಹುಟ್ಟುಹಾಕುವ ಜೀವ ವಿರೋಧಿ ದ್ವೇಷ ರಾಜಕಾರಣದಿಂದಲ್ಲ, ಜೀವಪರವಾದ ಪ್ರೀತಿಯ ರಾಜಕಾರಣದಿಂದ ಮಾತ್ರ ಎನ್ನುವುದು ನಮ್ಮ ನಂಬಿಕೆಯಾಗಿದೆ. ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಧಾನತೆ, ಮತಾಂಧತೆಗಳು ಒಂದಾಗಿ ರೂಪಿಸುತ್ತಿರುವ ದ್ವೇಷ ರಾಜಕಾರಣವು ಹುಟ್ಟುಹಾಕುತ್ತಿರುವ ಹಿಂಸೆಯನ್ನು ಎದುರಿಸಲು ಮಹಿಳೆಯರು ಮತ್ತು ಸಮಸಮಾಜವನ್ನು ಕಟ್ಟಲು ಬದ್ಧರಾಗಿರುವವರೆಲ್ಲರೂ ಸಂಘಟಿತರಾಗುವ ತುರ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಎಂದೇ **'ಸಮತೆಯೆಡೆಗೆ ನಮ್ಮ ನಡಿಗೆ'** ಎನ್ನುವುದು ನಮ್ಮ ಗುರಿಯಾಗಿದೆ ಮತ್ತು ಸಹಬಾಳ್ವೆಯ ಪ್ರೀತಿಯ ರಾಜಕಾರಣವು ನಮ್ಮ ದಾರಿಯಾಗಿದೆ.

ಮಹಿಳೆಯರ ಮೇಲಿನ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳು ಅಳಿಯದೆ ಸ್ವಸ್ಥ ಸಮಾಜ ಸಾಧ್ಯವಿಲ್ಲವೆಂಬ ಅರಿವು ಮೂಡಿಸಲು; ಸಹಜೀವಿಯಾಗಿ ಸಮಾನತೆ-ಸಹಬಾಳ್ವೆಯ ಬದುಕನ್ನು ಕಟ್ಟಲು ಈ ನೆಲದ ಮಹಿಳೆಯರು ಕೈಗೆ ಕೈ ಜೋಡಿಸಿ ಸಮಾನ ಮನಸ್ಕ ಸಂಗಾತಿಗಳೊಂದಿಗೆ ಶಿವಮೊಗ್ಗದಲ್ಲಿ ಮಾರ್ಚ್ 8, 9ರಂದು ಸಮಾವೇಶಗೊಳ್ಳಲಿದ್ದಾರೆ.

## ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳ ವಿವರ

- ಫೆಬ್ರುವರಿ 1, 2018ರಿಂದ ಮಾರ್ಚ್ 8ರ ತನಕ **ಪ್ರತಿ ಗುರುವಾರ** (ಫೆಬ್ರವರಿ 8, 15, 22 ಮತ್ತು ಮಾರ್ಚ್ 1) ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ 'ಬಿಳಿಯುಡುಗೆಯಲ್ಲಿ ನಾವು' ಮೌನಜಾಗೃತಿ ಕಾರ್ಯಕ್ರಮ ನಡೆಯಲಿದೆ.
- ಮಾರ್ಚ್ 8ರಂದು ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ **'ಮಹಿಳೆ, ಸಮಾಜ ಮತ್ತು ಸಂವಿಧಾನ'** ಕುರಿತು ವಿಚಾರ ಸಂಕಿರಣ ಮತ್ತು ಸಂವಾದ ಹಾಗೂ ಕಳೆದ ವರ್ಷದ ಸಮಾವೇಶದ ಸ್ಮರಣ ಸಂಚಿಕೆಯ ಬಿಡುಗಡೆ ನಡೆಯಲಿದೆ. ಪುಣೆಯ ಸಮಾಜವಾದಿ ಸ್ತ್ರೀವಾದಿ ಚಿಂತಕಿ, ಲೇಖಕಿ ಮತ್ತು ಕಾರ್ಯಕರ್ತೆ **ಮನಿಶಾ ಗುಪ್ತೆ** ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯದ ನಾನಾ ಭಾಗಗಳಿಂದ ಸಂಪನ್ಮೂಲ ವ್ಯಕ್ತಿಗಳು ಆಗಮಿಸಲಿದ್ದಾರೆ. ಅಂದು ಸಾಯಂಕಾಲ ಶಿವಮೊಗ್ಗದ ಗೋಪಿ ಸರ್ಕಲಿನಲ್ಲಿ 'ಬಿಳಿಯುಡುಪಿನಲ್ಲಿ ನಾವು' ಮೌನ ಜಾಗೃತಿ ಕಾರ್ಯಕ್ರಮ ನಡೆಯಲಿದೆ.
- ಮಾರ್ಚ್ 9 ರಂದು ಬೆಳಗ್ಗೆ 10 ಗಂಟೆಗೆ ನೆಹರೂ ಮೈದಾನದಿಂದ **'ಹಕ್ಕೊತ್ತಾಯ ಜಾಥಾ'** ಆರಂಭವಾಗಿ ಶಿವಮೊಗ್ಗದ ಪ್ರಮುಖ ಬೀದಿಗಳಲ್ಲಿ ಸಾಗಿ ಮತ್ತೆ ನೆಹರೂ ಮೈದಾನದಲ್ಲಿ ಸಮಾವೇಶಗೊಳ್ಳಲಿದೆ. ಕರ್ನಾಟಕದ ಮಹಿಳಾ ಹೋರಾಟಗಾರ್ತಿಯರು, ಕಲಾವಿದರು, ರಂಗಕರ್ಮಿಗಳು, ಸಾಹಿತಿಗಳು, ಜನಪರ ಚಳುವಳಿಯ ಪ್ರತಿನಿಧಿಗಳು ಮತ್ತು ಮಹಿಳಾಪರ ಮನಸುಗಳು ಶಿವಮೊಗ್ಗಕ್ಕೆ ಬರಲಿದ್ದಾರೆ. ಮುಂಬಯಿಯ ನ್ಯಾಯವಾದಿ, ಸ್ತ್ರೀವಾದಿ ಚಿಂತಕಿ, ಕಾರ್ಯಕರ್ತೆ ಮತ್ತು ಲೇಖಕಿ **ಫ್ಲೇವಿಯಾ ಆಗ್ನೆಸ್** ಹಾಗೂ ಲೇಖಕಿ, ಸಂಶೋಧಕಿ ಮತ್ತು ಫುಲೆ–ಅಂಬೇಡ್ಕರ್‌ವಾದೀ ಸ್ತ್ರೀಪರ ಚಿಂತಕಿ **ಲತಾ ಪಿ. ಎಂ.** ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಬಹಿರಂಗ ಸಾರ್ವಜನಿಕ ಸಭೆ ನಡೆಯಲಿದೆ.

### ನಮ್ಮ ಹಕ್ಕೊತ್ತಾಯಗಳು

- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ದೌರ್ಜನ್ಯ, ಅತ್ಯಾಚಾರಗಳು ನಿಲ್ಲಬೇಕು. ಹೆಣ್ಣು ಮಕ್ಕಳ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣಗಳ ತನಿಖೆ ಶೀಘ್ರವಾಗಿ ನಡೆದು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.
- ದಿಟ್ಟ ಪತ್ರಕರ್ತೆ ಗೌರಿ ಲಂಕೇಶ್‌ರ ಹತ್ಯೆಯ ಪ್ರಕರಣದ ತನಿಖೆ ಶೀಘ್ರ ನಡೆದು ಆರೋಪಿಗಳಿಗೆ ತಕ್ಕ ಶಿಕ್ಷೆ ನೀಡಬೇಕು. ಮುಂದೆ ಹೀಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಪ್ರಕರಣಗಳು ಜರುಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ, ಆಸಿಡ್ ದಾಳಿ, ಮಹಿಳೆ ಮತ್ತು ಮಕ್ಕಳ ಮಾರಾಟ ಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು.
- ಆರೋಗ್ಯಕರ ಲೈಂಗಿಕ ಶಿಕ್ಷಣದ ಜೊತೆಗೆ ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಅಂತಹ ಪಠ್ಯಕ್ರಮ ಶಿಕ್ಷಣದಲ್ಲಿ ಜಾರಿಯಾಗಬೇಕು.
- ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯ ರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸಬೇಕು. ಚುನಾವಣೆ, ಕೋಮುಗಲಭೆಗಳ ಕಾಲದಲ್ಲಿ ಮಹಿಳೆಯರು ದಾಳವಾಗಿ, ಉಪಕರಣವಾಗಿ ಬಳಕೆಯಾಗುವುದು ನಿಲ್ಲಬೇಕು. ಮಹಿಳಾ ಸಮೂಹ ಸ್ಪಷ್ಟ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲು ಸಂಘಟನೆ–ಸಮಾಜ–ಮಾಧ್ಯಮಗಳು ಅನುವು ಮಾಡಿಕೊಡಬೇಕು.
- ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಕೌಶಲ್ಯಕ್ಕೆ ತಕ್ಕ ಉದ್ಯೋಗ ಮತ್ತು ಬದುಕುವ ವೇತನ ಮಹಿಳೆಯರಿಗೆ ದೊರೆಯಬೇಕು. ಗಾರ್ಮೆಂಟ್ಸ್ ಕಾರ್ಮಿಕರು, ಅಂಗನವಾಡಿ–ಬಿಸಿಯೂಟ–ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದ ದುಡಿಮೆಗಾರರಿಗೆ ಬದುಕುವ ವೇತನ, ಆರೋಗ್ಯಕರ ಕೆಲಸದ ವಾತಾವರಣ, ಸಮಾನ ವೇತನ ಸಿಗಲೇಬೇಕು.
- ಜಾತಿ ತಾರತಮ್ಯ, ಜಾತಿ ದೌರ್ಜನ್ಯ ಮತ್ತು ಅಸ್ಪೃಶ್ಯತೆ ಕೊನೆಯಾಗಬೇಕು. ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು ಸಿಗಲೇಬೇಕು. ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣ ಯಾಂತ್ರೀಕೃತಗೊಳಿಸಬೇಕು.

- ವಲಸೆಯ ಮುಖ್ಯ ಕಾರಣ ನಿರುದ್ಯೋಗ. ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ದೇವದಾಸಿ ಪದ್ಧತಿ ಕೊನೆಗೊಳ್ಳಬೇಕು. ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.
- ಕೃಷಿ ಮತ್ತು ಅಸಂಘಟಿತ ವಲಯವೂ ಸೇರಿದಂತೆ ಎಲ್ಲ ಕಡೆ ಬಾಲಕಾರ್ಮಿಕರ ನೇಮಕ ಕಟ್ಟುನಿಟ್ಟಾಗಿ ನಿಷೇಧಗೊಳ್ಳಬೇಕು.
- ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಬೇಕು.
- ಮುಟ್ಟಿನ ಹೆಸರಿನಲ್ಲಿ ಮಹಿಳೆಯರ ಹೊರಗಿಡುವಿಕೆ, ಶೋಷಣೆ ನಿಲ್ಲಬೇಕು.
- 1984ರಲ್ಲಿ ಆದೇಶವಾಗಿರುವ ಶೇ.33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದುಕೊಂಡು ಅವರ ಬದುಕನ್ನು ದಿಕ್ಕಾಪಾಲಾಗಿಸುವ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು. ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆ ಜಾರಿಯಾಗಬೇಕು.
- ಶೌಚಾಲಯ, ಒಳಚರಂಡಿ ನಿರ್ಮಾಣ, ನೀರು ಪೂರೈಕೆ ವ್ಯವಸ್ಥೆಗಳನ್ನು ಗ್ರಾಮೀಣ ಭಾಗಗಳಿಗೂ ಸೇರಿದಂತೆ ಕ್ರಿಯಾಯೋಜನೆಗಳನ್ನು ರೂಪಿಸಿ ನಿರ್ದಿಷ್ಟ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕು.

**ಸಹಭಾಗಿ ಸಂಘಟನೆಗಳು/ಸಂಸ್ಥೆಗಳು**

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ–ಮಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಮಾನಸ ಬಳಗ–ಬೆಂಗಳೂರು, ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ ಬೆಂಗಳೂರು, ವಿಮೆನ್ಸ್ ವಾಯ್ಸ್ ಬೆಂಗಳೂರು, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್. ಕರ್ನಾಟಕ, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸ್ಪಂದನ–ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಬೆಂಗಳೂರು, ಸಾಧನಾ ಮಹಿಳಾ ಗುಂಪು–ಬೆಂಗಳೂರು, ವಿಮೋಚನ ಸಂಘ–ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಉತ್ತರ ಕರ್ನಾಟಕ ಲೇಖಕಿಯರ ಸಂಘ ಹುಬ್ಬಳ್ಳಿ–ಧಾರವಾಡ; ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೋಗ್ರೆಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ದಲಿತ ಬಹುಜನ ಚಳವಳಿ, ನ್ಯಾಷನಲ್ ಫೆಡರೇಷನ್ ಫಾರ್ ಇಂಡಿಯನ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್, ಮುನ್ನಡೆ ಸಾಮಾಜಿಕ ಸಂಘಟನೆ, ಸ್ತ್ರೀ ಜಾಗೃತಿ ಸಮಿತಿ, ಚರಕ ಮಹಿಳಾ ವಿವಿಧೋದ್ದೇಶ ಸಂಘ–ಹೆಗ್ಗೋಡು, ಸಖಿ ಸಂಸ್ಥೆ– ಹೊಸಪೇಟೆ, ಎಸ್‌ಎಫ್‌ಐ, ಡಿವೈಎಫ್‌ಐ, ಎ.ಐ.ಟಿ.ಯು.ಸಿ, ಸಿಐಟಿಯು, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ರಿ), ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಅನೇಕ ಬೆಂಗಳೂರು, ಜೀವಾ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಹ್ಯುಮ್ಯಾನಿಟಿ, ರೇಡಿಯೋ ಆಕ್ಟಿವ್ ಬೆಂಗಳೂರು, ಪ್ರಜಾರಾಜ್ಯ ವೇದಿಕೆ, ವಿಸ್ತಾರ್, ಜನಸಹಯೋಗ, ತರಿಕಿಟ ಕಲಾಕಮ್ಮಟ ಮಂಗಳೂರು, ಸಂವಾದ, ಭಾರತೀಯ ಜ್ಞಾನ–ವಿಜ್ಞಾನ ಸಮಿತಿ, ಸ್ಲಂ ಜನಾಂದೋಲನ ಸಮಿತಿ, ಬಿಬಿಎಂಪಿ ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಸಿಟಿಯು, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮುಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ–ಕವಲಕ್ಕಿ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತಿ ಮಹಿಳಾ ಸಂಸ್ಥೆ, ಮಹಿಳಾ ಸಮಖ್ಯಾ, ಚೈತನ್ಯ ಮಹಿಳಾ ಕೋಆಪರೇಟಿವ್ ಬ್ಯಾಂಕ್ ಲಿ. ವಿಜಯಪುರ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ, ವಿಜಯಪುರ, ಕೊಪ್ಪಳ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ದಲಿತ ಬಹುಜನ ಚಳವಳಿ – ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತಿ – ಧಾರವಾಡ,

ಲಡಾಯಿ ಪ್ರಕಾಶನ ಗದಗ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ್ – ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು,

**ಶಿವಮೊಗ್ಗ ಜಿಲ್ಲೆಯ ಸಂಘಟನೆಗಳು:**

ಕರ್ನಾಟಕ ರಾಜ್ಯ ಅಕ್ಷರ ದಾಸೋಹ, ಬಿಸಿಯೂಟ ತಯಾರಕರ ಫೆಡರೇಷನ್ ಶಿವಮೊಗ್ಗ ಜಿಲ್ಲಾ ಸಮಿತಿ, ದಲಿತ ಸಂಘರ್ಷ ಸಮಿತಿ (ರಿ) ಶಿವಮೊಗ್ಗ, ರಾಜ್ಯ ಸರಕಾರಿ ನೌಕರರ ಸಂಘ, ಕರ್ನಾಟಕ ಅರಣ್ಯಮೂಲ ಬುಡಕಟ್ಟುಗಳ ಒಕ್ಕೂಟ, ದಿ ಶಿವಮೊಗ್ಗ ಮಲ್ಟಿಪರ್ಪಸ್ ಸೋಶಿಯಲ್ ಸರ್ವೀಸ್ ಸೊಸೈಟಿ, ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ ಲೇಖಕಿಯರ ಸಂಘ, ಜನ ಹೋರಾಟ ಪತ್ರಿಕೆ ಶಿವಮೊಗ್ಗ, ಹೊಸ ಮನುಷ್ಯ ಪತ್ರಿಕಾ ಬಳಗ, ಕಲಾವಿದರ ಒಕ್ಕೂಟ (ರಿ), ಕರ್ನಾಟಕ ರಾಜ್ಯ ಪರಿಶಿಷ್ಟಜಾತಿ ಮತ್ತು ವರ್ಗಗಳ ನೌಕರರ ಒಕ್ಕೂಟ, ಶಿವಮೊಗ್ಗ ಜಿಲ್ಲಾ ಪತ್ರಕರ್ತರ ಸಂಘ, ಪ್ರೆಸ್ ಟ್ರಸ್ಟ್ ಶಿವಮೊಗ್ಗ, ಜಿಲ್ಲಾ ವಕೀಲರ ಸಂಘ, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಸಾಧನಾ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ(ರಿ) ಶಿವಮೊಗ್ಗ, ರಕ್ಷಾ ಸಮುದಾಯ ಸಂಘಟನೆ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಚಾವಡಿ ಬಳಗ, ಮಲೆನಾಡು ಸಂಘರ್ಷ ಸಮಿತಿ ತೀರ್ಥಹಳ್ಳಿ, ಎ.ಐ.ಟಿ.ಯು.ಸಿ, ಸ್ವರಾಜ್ ಇಂಡಿಯಾ ಅಭಿಯಾನ, ಸಮಾಜವಾದಿ ಅಭಿಯಾನ, ಲೋಹಿಯಾ ಜನ್ಮಶತಾಬ್ಧಿ ಟ್ರಸ್ಟ್ (ರಿ) ಸಾಗರ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಾಗರ, ಕರ್ನಾಟಕ ರಾಜ್ಯ ರೈತ ಸಂಘ, ಚಾರ್ವಾಕ ಪತ್ರಿಕಾ ಬಳಗ ಸಾಗರ, ಸಾಗರ ಮಹಿಳಾ ಸಮಾಜ, ಸ್ಪಂದನ (ರಿ) ಸಾಗರ, ಪ್ರಜ್ಞಾ ರಂಗ ತಂಡ, ಚರಕ ವಿವಿಧೋದ್ದೇಶ ಮಹಿಳಾ ಸಂಘ ಹೆಗ್ಗೋಡು, ಪ್ರಗತಿಪರ ಒಕ್ಕೂಟಗಳ ಸಂಘಟನೆ ಸೊರಬ, ಅಂತರಂಗ ಟ್ರಸ್ಟ್ (ರಿ) ಸಾಗರ, ನಟ ಮಿತ್ರರು ತೀರ್ಥಹಳ್ಳಿ, ಸ್ಪಂದನ ತೀರ್ಥಹಳ್ಳಿ, ಭಾರತೀಯ ಮಾನವ ಹಕ್ಕು ವೇದಿಕೆ, ಪತ್ರಕರ್ತರ ಸಂಘ ತೀರ್ಥಹಳ್ಳಿ, ಮಹಿಳಾ ಸ್ವಸಹಾಯ ಸಂಘ, ಅಂಟಿಗೆಪಂಟಿಗೆ ಮಹಿಳಾ ತಂಡ ಮೇಗರವಳ್ಳಿ, ಸಾಗರ ಮಹಿಳಾ ಸಮಾಜ, ಕರ್ನಾಟಕ ಜನಶಕ್ತಿ ಭದ್ರಾವತಿ, ಪ್ರಜಾಸಂಘರ್ಷ ವೇದಿಕೆ ಭದ್ರಾವತಿ, ದಲಿತ ಸಂಘಗಳ ಒಕ್ಕೂಟ, ಚಲವಾದಿ ಮಹಾಸಭಾ ಭದ್ರಾವತಿ, ಕರ್ನಾಟಕ ಮಾದಿಗ ಮಹಾಸಭಾ (ರಿ) ಭದ್ರಾವತಿ, ದಲಿತ ನೌಕರರ ಒಕ್ಕೂಟ (ಶಿ) ಭದ್ರಾವತಿ ಶಾಖೆ, ಕೆ ವಿ ಸುಬ್ಬಣ್ಣ ರಂಗಸಮೂಹ ಹೆಗ್ಗೋಡು, ನಾದಚಾವಡಿ ಕಲ್ಲೊಪ್ಪ ಹೊಸನಗರ ತಾ., ಸಾರಾ ಸಂಸ್ಥೆ ಹೊಸನಗರ ತಾ., ಯುವಕ ಯುವತಿಯರ ಸಂಘ – ಗಾಜನೂರು, ವಿವೇಕ ಶಿವಮೊಗ್ಗ, ಸಿರಿಗನ್ನಡ ಪುಸ್ತಕಮನೆ, ಕರ್ನಾಟಕ ಸಂಘ, ಶಿವಮೊಗ್ಗ, ಸಾಹಿತ್ಯ ಸಮುದಾಯ, ಶಿವಮೊಗ್ಗ, ನಮ್ಮ ಹಕ್ಕು ವೇದಿಕೆ, ಶಿವಮೊಗ್ಗ, ತುಂಗಾ ಮಹಿಳಾ ಸ್ವಸಹಾಯ ಸಂಘಗಳ ಸ್ತ್ರೀಶಕ್ತಿ ಸಂಘಗಳ ಒಕ್ಕೂಟ, ನಿರ್ಮಲ ಸೇವಾ ಕೇಂದ್ರ, ಶಿವಮೊಗ್ಗ ಮತ್ತು ನೀವೆಲ್ಲ.

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**
**ಶಿವಮೊಗ್ಗದಲ್ಲಿ ಮಾರ್ಚ್ 8, 9ರಂದು ಸೇರೋಣ..**
**ಎಲ್ಲ ಒಂದಾಗಿ ಸಮತೆಯ ನಾಡ ಕಟ್ಟೋಣ.. ..**

**ಸಂಪರ್ಕ ಸಂಖ್ಯೆಗಳು :**

ಪ್ರತಿಭಾ ಸಾಗರ – 9945178792, ಭಾಗೀರಥಿ ಚರಕ – 9741148103, ಮಂಜುಳಾ ರಾಜು – 9591047440,
ಟಿ. ಎಲ್. ರೇಖಾಂಬಾ ಶಿವಮೊಗ್ಗ – 9901445030, ಡಾ. ಸಬಿತಾ ಬನ್ನಾಡಿ – 9449204906,
ಗೀತಾ ಭದ್ರಾವತಿ – 7816098102, ಗಾಯತ್ರಿ ತೀರ್ಥಹಳ್ಳಿ – 9449948907, ಗುಲಾಬಿ ಬಿಳಿಮಲೆ – 9972673244,
ಗೌರಿ – 8971232329, ದು. ಸರಸ್ವತಿ – 9482642147, ವಾಣಿ ಪೆರಿಯೋಡಿ – 9448481340.